ಕಂಡುಬಂದವು. ಆದರೆ ಆ ಕಿಟಕಿಯಿಂದ ಬಂದ ವಲಸೆಯ ಜಗತ್ತು ಇಲ್ಲಿನ ಮೂಲನಿವಾಸಿ ಜಗತ್ತನ್ನು ಗೋಡೆಗೆ ಒತ್ತರಿಸುತ್ತಾ ಹೋಯಿತು. ಟೆಲಿವಿಷನ್ ಇಟ್ಟ ಹಾಲ್ ಮನೆಮಂದಿಯೆಲ್ಲಾ ಕೂರುವ ಜಗಲಿ, ಊಟದ ಕೋಣೆ, ಹಜಾರ ಎಲ್ಲವೂ ಆಯಿತು. ಆದರೆ ಅಲ್ಲಿ ಸಂವಾದ ಆಗುತ್ತಿದ್ದದ್ದು ವ್ಯಕ್ತಿಗಳ ನಡುವೆ ಅಲ್ಲ, ವ್ಯಕ್ತಿಗಳು ಮತ್ತು ಟೆಲಿವಿಷನ್ ನಡುವೆ. ಹೀಗೆ ಟೀವಿ ಆಧುನಿಕ ಜಗತ್ತಿನ ಕಥನ ವಾಹಕವಾಯಿತು. ನಂತರ ಬಂದದ್ದು ಕಂಪ್ಯೂಟರ್, ಲ್ಯಾಪ್‌ಟಾಪ್, ಸ್ಮಾರ್ಟ್ ಫೋನ್ ಇತ್ಯಾದಿ. ಟೀವಿ ಇದ್ದಾಗ ಕನಿಷ್ಠ ಮನೆಯವರೆಲ್ಲಾ ಭೌತಿಕವಾಗಿ ಆದರೂ ಒಂದೆಡೆ ಇರುತ್ತಿದ್ದರು.

ಮೊದಮೊದಲು ಇಲ್ಲಿನ ಪಂಚತಂತ್ರ, ರಾಮಾಯಣ, ಭೀಮ, ಹನುಮ ಟೀವಿಯಲ್ಲಿ ಕಥೆಗಳಾಗಿ ಬಂದರು. ಆದರೆ ತಯಾರಿಕ ವೆಚ್ಚವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ ಹೊಸತಾಗಿ ಈ ಕಥೆಗಳನ್ನು ಕಟ್ಟುವುದಕ್ಕಿಂತ ಈಗಾಗಲೇ ಟೀವಿ ಲೈಬ್ರರಿಯಲ್ಲಿ ಇರುವ ಕಥೆಗಳಿಗೆ ನಮ್ಮ ಭಾಷೆಯ ಧ್ವನಿಕೊಟ್ಟು ಹೇಳಿಸುವುದು ಲಾಭದಾಯಕವಾಗಿ ಕಂಡಿತು. ಹೀಗಾಗಿ ಎಲ್ಲಿಯದೋ ಪಾತ್ರಗಳು, ಎಲ್ಲಿಯದೋ ಸಂಸ್ಕೃತಿ ನಮ್ಮ ಮನೆಗಳಲ್ಲಿ ಅಡಿ ಇಟ್ಟಿತು. ಇದು ತಪ್ಪಲ್ಲ, ಇದೂ ಸಹ ಜಗತ್ತಿನ ಕತೆಗಳಿಗೆ ನಮ್ಮನ್ನು ತೆರೆದುಕೊಂಡಂತೆಯೇ. ಆದರೆ ನಿಜವಾದ ಅಪಾಯ ಇರುವುದು ನಮ್ಮ ಕಥೆಗಳನ್ನು ಬಿಡುವುದರಲ್ಲಿ ಮತ್ತು ಮಕ್ಕಳು ಈ ಕಥೆಗಳ ಲೋಕವನ್ನು ಬಿಟ್ಟು ಕಂಪ್ಯೂಟರ್ ಆಟಗಳಿಗೆ ಜೋತುಬೀಳುವುದರಲ್ಲಿ. ಬಹುತೇಕ ಎಲ್ಲಾ ಆಟಗಳೂ ಹೇಳುವುದು ಅದೇ ಮೂಲಮಂತ್ರ, ಹುಡುಕು, ಹೊಂಚು ಹಾಕು, ಕೊಲ್ಲು, ಪಾಯಿಂಟ್ ಗೆಲ್ಲು. ಸಾಮುದಾಯಿಕ ಬದುಕಿಗಿಂತ ವೈಯಕ್ತಿಕ ಬದುಕು ಈಗ ಪ್ರಧಾನವಾಗುತ್ತಿರುವುದು ಇವುಗಳಲ್ಲಿನ ಒಂದು ಅಪಾಯ.

ಇದಕ್ಕೆ ಪರ್ಯಾಯವಾಗಿ ಏನು ಮಾಡಬಹುದು? ಒಳಬಂದ ಜಾಗತೀಕರಣವನ್ನಾಗಲೀ, ಆಧುನೀಕರಣವನ್ನಾಗಲಿ ಹೊರತಳ್ಳಲು ಆಗುವುದಿಲ್ಲ. ಏಕೆಂದರೆ ಅದು ಅನೇಕ ಸಂಕೀರ್ಣ ಪದರಗಳನ್ನು ಹೊಂದಿದೆ. ಅದು ಸಂಸ್ಥಾಪಿತ ವ್ಯವಸ್ಥೆಯನ್ನು ಮುರಿದಾಗ ಅದರಿಂದ ಎಷ್ಟೋ ಬದುಕುಗಳಿಗೆ ಬಿಡುಗಡೆಯೂ ಸಿಕ್ಕಿದೆ. ಇವುಗಳ ಜೊತೆಯಲ್ಲಿಯೇ ಮಕ್ಕಳ ಮನಸ್ಸನ್ನು ಕಥನಗಳಿಂದ, ಕಲ್ಪನೆಯಿಂದ ತುಂಬಲು ಸಾಧ್ಯವೇ ಎಂಡು ಯೋಚಿಸಿದಾಗ, ನನಗೆ ಮೇಲುನೋಟಕ್ಕೆ ಹೊಳೆಯುವುದು ಕೆಲವು ಮಾರ್ಗಗಳು. ಒಂದು ಈಗೀಗ ಮನ್ನಣೆಗಳಿಸುತ್ತಿರುವ ಸ್ಟೋರಿ ಕ್ಲಬ್ ಅಥವಾ ಕಥಾ ಕೇಂದ್ರಗಳು, ಇರುವ ಸ್ಮಾರ್ಟ್ ಸಾಧನಗಳೊಳಗೆ ಪುಸ್ತಕದ ಕಸುವನ್ನೂ ಕಥೆಗಳನ್ನೂ ಸೇರಿಸುವುದು ಮತ್ತು ಅಷ್ಟೇ ಮುಖ್ಯವಾಗಿ ರಂಗಭೂಮಿ. ರಂಗಭೂಮಿ ಮಕ್ಕಳ ಬದುಕನ್ನು ಸಮುದಾಯ ಮತ್ತು ಸಮಷ್ಟಿಯೊಂದಿಗೆ ಬೆಸೆಯುವ ಒಂದು ಮುಖ್ಯ ಕೊಂಡಿ. ಅದು ಕಥನ ಮತ್ತು ಸಮುದಾಯ ಎರಡನ್ನೂ ಪೋಷಿಸುತ್ತದೆ. ಇದು ಎಲ್ಲರೂ ಜೊತೆಯಲ್ಲಿ ಹೆಜ್ಜೆ ಇಡುವ ಹಾದಿ. ಇಲ್ಲಿ ಮಾತು ಎಂದರೆ ಕೇವಲ ಮಾತಲ್ಲ, ಅದೊಂದು ನಿರಂತರ ಸಂವಹನ, ಅದು ಹೇಳುವುದೂ ಹೌದು, ಕೇಳುವುದೂ ಹೌದು, ಪ್ರತಿಕ್ರಿಯಿಸುವುದೂ ಹೌದು. ಆಧುನೀಕರಣದ ಪರಿಕರಗಳನ್ನು ಬಳಸಿಕೊಂಡು ರಂಗಭೂಮಿಯನ್ನು ಬಲಪಡಿಸುವುದು ಮತ್ತು ಆ ಮೂಲಕ ಜೀವಗಳ ನಡುವಿನ ಸಂವಾದವನ್ನು ಜಾರಿಯಲ್ಲಿಡುವುದು ಈ ಕಾಲಘಟ್ಟದ ಅಗತ್ಯವಾಗಿ ಕಾಣುತ್ತದೆ.

ಮನಮುಟ್ಟುವಂತೆ ಬರೆಯುವ ಲೇಖಕಿ ಸಂಧ್ಯಾರಾಣಿ 'ಯಾಕೆ ಕಾಡುತಿದೆ ಸುಮ್ಮನೆ ನನ್ನನು' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅಂತರ್ಜಾಲ ಬರವಣಿಗೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ.